




# ಒಟಿಟಿಯಲ್ಲಿ ಕನ್ನಡ ಸಿನಿಮಾಗಳು

ಆನ್‌ಲೈನ್ ಪ್ಲ್ಯಾಟ್‌ಫಾರಂ ಎನ್ನುವುದು ಚಿತ್ರಮಂದಿರಗಳಿಗೆ ಪರ್ಯಾಯ ವೇದಿಕೆ ಎಂದೇ ಹೇಳಲಾಗುತ್ತಿದೆ. ಇತ್ತೀಚೆಗಿನ ಬೆಳವಣಿಗೆಗಳನ್ನು ಗಮನಿಸಿದರೆ ಅದು ನಿಜ ಎಂತಲೂ ಅನಿಸುತ್ತದೆ. 'ಚಿತ್ರಮಂದಿರಗಳಲ್ಲಿ ಸಿನಿಮಾ ನೋಡುವ ಅನುಭವವನ್ನು ಯಾವ ಒಟಿಟಿ ಪ್ಲ್ಯಾಟ್‌ಫಾರಂ ಕೂಡ ನೀಡಲು ಸಾಧ್ಯವಿಲ್ಲ. ಜನ ಮತ್ತೆ ಚಿತ್ರಮಂದಿರಗಳಿಗೆ ಬಂದೇ ಬರುತ್ತಾರೆ' ಎಂದು ಗಾಂಧಿನಗರ ಮಂದಿ ಜೋರು ಧ್ವನಿಯಲ್ಲಿ ಹೇಳುತ್ತಿರುವಾಗಲೇ ಒಂದಿಷ್ಟು ಸಿನಿಮಾಗಳು ನೇರವಾಗಿ ಒಟಿಟಿ ವೇದಿಕೆಯಲ್ಲಿಯೇ ಬಿಡುಗಡೆಗೊಳ್ಳುತ್ತಿವೆ. ಆ ಪಟ್ಟಿ ಬೆಳೆಯುತ್ತಲೇ ಹೋಗುತ್ತಿವೆ.

ಕಳೆದ ವರ್ಷ ಆದರ್ಶ್ ಈಶ್ವರಪ್ಪ ನಿರ್ದೇಶನದ 'ಭಿನ್ನ' ಸಿನಿಮಾಗಳು ನೇರವಾಗಿ 'ಜಿ 5'ನಲ್ಲಿ ಬಿಡುಗಡೆಯಾಗಿತ್ತು. ಇದು ಬಹುಶಃ ಒಟಿಟಿಯಲ್ಲಿ ನೇರವಾಗಿ ಬಿಡುಗಡೆಯಾದ ಕನ್ನಡದ ಮೊದಲ ಸಿನಿಮಾ. ಆದರೆ ಕೊರೊನಾ ಲಾಕ್‌ಡೌನ್ ಹಿನ್ನೆಲೆಯಲ್ಲಿ ಚಿತ್ರಮಂದಿರ, ಚಿತ್ರರಂಗದ ಚಟುವಟಿಕೆಗಳೆಲ್ಲ ಸ್ತಬ್ಧವಾಗಿರುವುದು ಒಟ್ಟಾರೆ ಸಿನಿಮಾ ನಿರ್ಮಾಣದ ಲೆಕ್ಕಾಚಾರಗಳನ್ನೂ ತಲೆಕೆಳಗು ಮಾಡುತ್ತಿದೆ. ಇದರ ಪರಿಣಾಮವೇ ಏನೋ ಎನ್ನುವ ಹಾಗೆ ಪಿಆರ್‌ಕೆ ಪ್ರೊಡಕ್ಷನ್ಸ್ ಅಡಿಯಲ್ಲಿ ರೂಪುಗೊಂಡ 'ಲಾ' ಮತ್ತು 'ಫ್ರೆಂಚ್ ಬಿರಿಯಾನಿ' ಸಿನಿಮಾಗಳು ಇದೇ ತಿಂಗಳು ಅಮೆಜಾನ್ ಪ್ರೈಮ್‌ನಲ್ಲಿ ನೇರವಾಗಿ ಬಿಡುಗಡೆಯಾಗುತ್ತಿವೆ.

ಇದು ಇಷ್ಟಕ್ಕೆ ನಿಂತಿಲ್ಲ. ಧನಂಜಯ್ ರಂಜನ್ ನಿರ್ದೇಶನದ 'ಮೈಸೂರು ಡೈರೀಸ್' ಮತ್ತು ಶಶಿಕಾಂತ್ ನಿರ್ದೇಶನದ 'ರಾಂಚಿ' ಸಿನಿಮಾಗಳೂ ನೇರವಾಗಿ ಒಟಿಟಿ ಪ್ಲ್ಯಾಟ್‌ಫಾರಂನಲ್ಲಿ ನೋಡುಗರ ಮನೆಗೇ ತಲುಪಲು ಸಿದ್ಧವಾಗಿವೆ.




ಇದು ಚಿತ್ರರಂಗದ ಭವಿಷ್ಯದ ದಿಕ್ಸೂಚಿಯೇ? ಈಗಲೇ ಏನೂ ನಿರ್ಧಾರಾತ್ಮಕವಾಗಿ ಹೇಳುವುದು ಕಷ್ಟ. ಸಿದ್ಧವಾಗಿರುವ ಸಿನಿಮಾಗಳನ್ನು ಹಾಗೆಯೇ ಇಟ್ಟುಕೊಳ್ಳುವುದೆಂದರೆ ಕೆಂಡವನ್ನು ಸೆರಗಲ್ಲಿ ಕಟ್ಟಿಕೊಂಡ ಹಾಗೆ. ಸಾಲ ಮಾಡಿ ಸಿನಿಮಾಗೆ ಹಣ ಹೂಡಿರುವವರಿಗೆ ಒಂದೊಂದು ದಿನವೂ ಅಮೂಲ್ಯವಾಗಿರುತ್ತದೆ. ಇದೇ ಕಾರಣಕ್ಕೆ ಬಂದಷ್ಟು ಬರಲಿ ಎಂದುಕೊಂಡು ಒಟಿಟಿ ಮೊರೆ ಹೋಗಿರಲಿಕ್ಕೂ ಸಾಕು.

ಹಾಗಾದರೆ ಚಿತ್ರಮಂದಿರಗಳ ಗತಿ ಏನು? ಈ ಪ್ರಶ್ನೆಗೆ ಉತ್ತರ ಸಿಗಲು ಇನ್ನೂ ಕೊಂಚ ಸಮಯ ಕಾಯಲೇಬೇಕು. ■



# ನನ್ನ ಕನಸು ಕನ್ನಡದ್ದು!

'ನಾನು ರಾಜ್‌ಕುಮಾರ್ ಅಭಿಮಾನಿ ಅಲ್ಲ; ಭಕ್ತ' ಎಂದು ಹೇಳಿಕೊಳ್ಳುವ ರೋಚಿತ್, ಈಗಾಗಲೇ ಬಾಲಿವುಡ್ ರುಚಿಯನ್ನೂ ಉಂಡು ಬಂದಿದ್ದಾರೆ. ತಮಿಳು ಸಿನಿಮಾವೊಂದರಲ್ಲಿ ನಟಿಸುತ್ತಿದ್ದಾರೆ. ಆದರೂ ಅವರ ಒಲವು ಇರುವುದೆಲ್ಲ ಕನ್ನಡದ ಮೇಲೆಯೇ.

■ ಪದ್ಮನಾಭ ಭಟ್

'ಕನ್ನಡ. ನನ್ನ ತಾಯ್ನುಡಿ, ನನ್ನ ಜೀವ. ರಾಜ್‌ಕುಮಾರ್ ನಮ್ಮ ಪಾಲಿಗೆ ದೈವ. ನಾನು ಏನೇ ಸಾಧನೆ ಮಾಡಿದ್ರೂ ಇಲ್ಲಿಯೇ ಮಾಡುವುದು. ಸೋತರೂ ಗೆದ್ದರೂ, ಇದ್ದರೂ ಅಳಿದರೂ, ಏನೇ ಆದರೂ ನನ್ನ ದೃಷ್ಟಿ ಮತ್ತು ಎಲ್ಲ ನೆಟ್ಟಿರುವುದು ಕನ್ನಡದಲ್ಲಿಯೇ. ನಾನು ಕಾಣುತ್ತಿರುವುದು ಕನ್ನಡದ್ದೇ ಕನಸು. ಬೇರೆ ಭಾಷೆಗಳಲ್ಲಿ ನಟಿಸುವುದೇನಿದ್ದರೂ ಹೊಟ್ಟೆಪಾಡು. ಆದರೆ...'

ಯಾವುದೋ ಸಿನಿಮಾ ಡೈಲಾಗ್ ಎನ್ನುವ ಹಾಗೇ ತುಸು ಆವೇಶದಿಂದಲೇ ಹೇಳಿದರು ರೋಚಿತ್. ಆದರೆ ಅವರ ಮಾತಿನ ಕೊನೆಗೆ 'ಆದರೆ..' ಎಂದು ತುಸು ತಡೆದು ಬಿಟ್ಟ ನಿಟ್ಟುಸಿರಲ್ಲಿ ಆವೇಶವಿರಲಿಲ್ಲ. ಬದಲಿಗೆ ವಿಷಾದವಿತ್ತು; ತುಸು ಕಹಿಯಿತ್ತು. ಅದನ್ನು ಮೀರುವ ಛಲವೂ ಇತ್ತು. ಆ ನಿಟ್ಟುಸಿರ ಬಿಸಿ ಆರುವ ಮೊದಲೇ ಅವರು ಫ್ಲ್ಯಾಷ್‌ಬ್ಯಾಕ್‌ಗೆ ಜಿಗಿದರು.

ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದ ಹುಡುಗ ರೋಚಿತ್. ಬಣ್ಣದ ಲೋಕದಲ್ಲಿಯೇ ಬದುಕನ್ನು ಕಂಡುಕೊಳ್ಳುವ ಹಟದಲ್ಲಿ ಅವುಡುಗಚ್ಚಿ ಯತ್ನಿಸುತ್ತಿರುವ ಅವರಿಗೆ, ನಟನೆಯ ಮೋಹ ಅಂಟಿದ್ದು ತಂದೆಯಿಂದ.

'ನನ್ನ ತಂದೆ ಡ್ರೈವರ್ ಆಗಿದ್ದರು. ಆದರೆ ಅವರಿಗೆ ನಟ ಆಗಬೇಕು ಎಂಬ ಆಸೆ ತುಂಬ ಇತ್ತು. ಒಂದೆರಡು ಸಿನಿಮಾಗಳಲ್ಲಿ ಹೀಗೆ ಬಂದು ಹಾಗೆ ಹೋಗುವ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು ಕೂಡ. ಆದರೆ ನಟನಾಗಿ ಬೆಳೆಯುವುದು ಸಾಧ್ಯವಾಗಲಿಲ್ಲ. ಬಹುಶಃ ಅವರ ಕನವರಿಕೆಯೇ ನನ್ನಲ್ಲಿ ಮುಂದುವರಿಯಿತೇನೋ. ರಾಜ್‌ಕುಮಾರ್ ಸಿನಿಮಾಗಳನ್ನು ನೋಡಿಕೊಂಡು ಬೆಳೆದೆ. ನಾನು ಎಸ್ಸೆಸ್ಸೆಲ್ಸಿಯಲ್ಲಿದ್ದಾಗ ಬಿಡುಗಡೆಯಾದ 'ಮುಂಗಾರು ಮಳೆ' ಸಿನಿಮಾವನ್ನು ಇಪ್ಪತ್ತಕ್ಕೂ ಹೆಚ್ಚು ಸಲ ನೋಡಿದ್ದೆ. ಕ್ರಿಕೆಟ್ ಮ್ಯಾಚ್ ಆಡಿ ಹತ್ತಿಪ್ಪತ್ತು ರೂಪಾಯಿ ಗೆದ್ದು, ಕ್ಲಾಸಿಗೆ ಬಂಕ್ ಮಾಡಿ ಗಾಂಧಿಕ್ಲಾಸಿಗೆ ಹೋಗಿ ಕೂಡುತ್ತಿದ್ದೆವು. ಸಿನಿಮಾ ನೋಡುತ್ತ ನೋಡುತ್ತ ನಟನಾಗಬೇಕು ಎಂಬ ಆಸೆ ಬಲಿಯುತ್ತಲೇ ಹೋಯಿತು. ಆದರೆ ಮನೆಯಲ್ಲಿ ಮೊದಲು ಓದು ಮುಗಿಸು